# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**ಟಮಕ,ಕೋಲಾರ-563 103**

ಸಂಖ್ಯೆ: ಬೆಂ.ಉ.ವಿ. ಸುತ್ತೋಲೆ/897/2019-20 ದಿನಾಂಕ: 23.03.2020

## ಸುತ್ತೋಲೆ

**ವಿಷಯ:** Novel Corona Virus (Covid-19) ವೈರಸ್‌ನ ಸೋಂಕು ತಡೆಗಟ್ಟುವಿಕೆ ಮುಂಜಾಗ್ರತಾ ಕ್ರಮವಾಗಿ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ರಜೆ ಘೋಷಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಇಡಿ 139 ಯುಎಇ 2020 ದಿನಾಂಕ: 23.03.2020.

2. ಕುಲಪತಿಯವರ ಅನುಮೋದನೆ ದಿನಾಂಕ: 23.03.2020.

*****

Novel Corona Virus (Covid-19) ವೈರಸ್‌ನ ಸೋಂಕು ತಡೆಗಟ್ಟುವಿಕೆ ಮುಂಜಾಗ್ರತಾ ಕ್ರಮವಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ **ದಿನಾಂಕ: 24.03.2020 ರಿಂದ 31.03.2020 ರವರೆಗೆ** ಅಭಿಯಂತರರ ವಿಭಾಗ ಮತ್ತು ಸೆಕ್ಯುರಿಟಿ ವಿಭಾಗಗಳನ್ನು **ಹೊರತುಪಡಿಸಿ** ಇನ್ನುಳಿದ ಎಲ್ಲಾ ಕಛೇರಿ ವಿಭಾಗಗಳಿಗೆ ಈ ಕೆಳಗೆ ತಿಳಿಸಿರುವ ಷರತ್ತಿನೊಂದಿಗೆ ರಜೆ ಘೋಷಿಸಲಾಗಿದೆ.

1. ವಿಶ್ವವಿದ್ಯಾಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿ/ ಸಂಶೋಧಕರು ಹಾಗೂ ಇತರೆ ಎಲ್ಲಾ ಸಿಬ್ಬಂದಿಗಳು ದಿನಾಂಕ: 31.03.2020 ರವರೆಗೆ ಮನೆಯಂದಲೇ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ;
2. ಬೋಧಕ/ಬೋಧಕೇತರ ಸಿಬ್ಬಂದಿಗಳು ಈ ಅವಧಿಯಲ್ಲಿ ಈ ಕೆಳಕಂಡ ಶೈಕ್ಷಣಿಕ ಚಟುವಟಿಕೆಗಳನ್ನು ತೊಡಗಿಸಿಕೊಳ್ಳುವುದು:

(ಅ) ಆನ್‌ಲೈನ್ ಮೂಲಕ ಬೋಧನೆ ಮತ್ತು ಆನ್‌ಲೈನ್ ಮೂಲಕ ಮೌಲ್ಯಮಾಪನ ಮಾಡಲು ಅಗತ್ಯವಿರುವ ಪಠ್ಯವಸ್ತು ಅಭಿವೃದ್ಧಿಪಡಿಸುವುದು.

(ಆ) ಮುಂದಿನ ಶೈಕ್ಷಣಿಕ ವರ್ಷಕ್ಕೆ ಅಗತ್ಯವಿರುವ ಪಠ್ಯ ಯೋಜನೆ/ ಟಿಪ್ಪಣಿಯನ್ನು ಸಿದ್ದಪಡಿಸುವುದು ಹಾಗೂ ತಾವು ಬೋಧಿಸುವ ಪಠ್ಯವಸ್ತುವನ್ನು ಅಭಿವೃದ್ದಿಪಡಿಸುವುದು.

(ಇ) ಲೇಖನಗಳನ್ನು ಪತ್ರಿಗಳನ್ನು ಬರೆಯುವುದು.

(ಈ) Question Bank ಆಗಿ ವಿನೂತನವಾದ ಪ್ರಶ್ನೆಗಳನ್ನು ಸಿದ್ದಪಡಿಸುವುದು.

(ಉ) ಏಕ್ ಭಾರತ್ ಶ್ರೇಷ್ಠ್ ಭಾರತ್ ಕಾರ್ಯಕ್ರಮಕ್ಕೆ ವಿನೂತನ ಯೋಜನೆಯನ್ನು ಸಿದ್ದಪಡಿಸುವುದು.

Scanned with CamScanner

3. ದಿನಾಂಕ: 31.03.2020 ರವರೆಗೆ ಬೋಧಕ/ಬೋಧಕೇತರ ಸಿಬ್ಬಂದಿ/ ಸಂಶೋಧಕರು/ ಗುತ್ತಿಗೆ/ ಗೌರವ ಶಿಕ್ಷಕರು ಸೇರಿದಂತೆ ಎಲ್ಲಾ ಸಿಬ್ಬಂದಿ ವರ್ಗದವರ ರಜಾ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣನಿಸುವುದು.
4. ಬೋಧಕ/ಬೋಧಕೇತರ ಸಿಬ್ಬಂದಿ/ ಸಂಶೋಧಕರು/ ಗುತ್ತಿಗೆ/ ಗೌರವ ಶಿಕ್ಷಕರು ಸೇರಿದಂತೆ ಎಲ್ಲಾ ಸಿಬ್ಬಂದಿ ವರ್ಗದವರನ್ನು ತುರ್ತ ಪರಿಸ್ಥಿತಿಯಲ್ಲಿ ಸಂಪರ್ಕಿಸಲು ಅವರ ದೂರವಾಣಿ ಸಂಖ್ಯೆಗಳನ್ನು/ ಇ-ಮೇಲ್ ವಿಳಾಸಗಳನ್ನು ವಿಶ್ವವಿದ್ಯಾಲಯಕ್ಕೆ ನೀಡತಕ್ಕದ್ದು.
5. ಈ ರಜಾ ಅವಧಿಯಲ್ಲಿ ಬೋಧಕ / ಬೋಧಕೇತರ ಸಿಬ್ಬಂದಿಗಳು ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ ಹಾಗೂ ವಿಶ್ವವಿದ್ಯಾಲಯಕ್ಕೆ ಬೋಧಕ/ಬೋಧಕೇತರ ಸಿಬ್ಬಂದಿಯವರ ಸೇವೆ ಅಗತ್ಯವಿದ್ದಾಗ ಕಡ್ಡಾಯವಾಗಿ ಸೇವೆಗೆ ಹಾಜರಾಗತಕ್ಕದ್ದು.

ಕುಲಸಚಿವರು(ಪ್ರ) 23/3/2020

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ-ಕರ್ನಾಟಕ-563 103.

ಅಗತ್ಯ ಕ್ರಮಕ್ಕಾಗಿ:

ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರು / ಎಲ್ಲಾ ವಿಭಾಗದ ಮುಖ್ಯಸ್ಥರು / ಪುರುಷ/ ಮುಖ್ಯ ಕ್ಷೇಮಪಾಲಕರ/ ಅಧಿಕಾರಿಗಳ/ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು- **ಆದ್ಯ ಗಮನಕ್ಕೆ ಹಾಗೂ ತಮ್ಮ ಅಧೀನಕ್ಕೆ ಒಳಪಡುವ ಎಲ್ಲಾ ಬೋಧಕ/ಬೋಧಕೇತರರು/ವಿದ್ಯಾರ್ಥಿ/ವಿದ್ಯಾರ್ಥಿನಿಯರ ಗಮನಕ್ಕೆ ತರಲು ಕೋರಲಾಗಿದೆ.**

**ಪ್ರತಿಗಳು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ, ಬೆಂಗಳೂರು-560 001.
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103.
3. ಕುಲಸಚಿವರು(ಪ್ರ), ಕುಲಸಚಿವರ(ಮೌ), ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103.
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಮಂಗಸಂದ್ರ, ಕೋಲಾರ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ.
5. ಕಛೇರಿ ಪ್ರತಿ.

Scanned with CamScanner